ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ರವರ ಕಛೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಎನ್.ಆರ್.ಚೌಕ, ಬೆಂಗಳೂರು-560 002.

ಸಂಖ್ಯೆ : ಮು.ಆ.ಅ(ಸಾ.ಆ)/ಪಿ.ಆರ್/ಪಿ-62/2023-24 ದಿನಾಂಕ : 06-03-2024

ದಿನಾಂಕ: 05-03-2024 ರಂದು ಪಾಲಿಕೆ ವ್ಯಾಪ್ತಿಯಲ್ಲಿ ಸೊಳ್ಳೆ ನಿಯಂತ್ರಣ ಕಾರ್ಯಕ್ರಮದ ಟೆಂಡರ್ ಕುರಿತು ಮಾನ್ಯ ವಿಶೇಷ ಆಯುಕ್ತರು(ಆರೋಗ್ಯ)ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಸಭಾ ನಡವಳಿಗಳು :-

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:

1. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ),
2. ಮುಖ್ಯ ಆರೋಗ್ಯಾಧಿಕಾರಿ(ಸಾ.ಆ) (ಪ್ರಭಾರ)
3. ವಲಯ ಆರೋಗ್ಯಾಧಿಕಾರಿಗಳು(ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ಮಹದೇವಪುರ, ದಾಸರಹಳ್ಳಿ, ಆರ್.ಆರ್.ನಗರ, ಯಲಹಂಕ)
4. ಆರೋಗ್ಯ ವೈದ್ಯಾಧಿಕಾರಿ (ಸರ್ವಜ್ಞ ನಗರ)
5. ಅಧ್ಯಕ್ಷರು (ಬಾಬು) ಬೆಂಗಳೂರು ಸಿಟಿ ಕಾರ್ಪೋರೇಷನ್ ವರ್ಕರ್ಸ್ ಫೆಡರೇಷನ್ ಸಂಘ
6. ವಿವಿಧ ಸಂಸ್ಥೆಯ ಗುತ್ತಿಗೆದಾರರು
7. ಇ-ಪ್ರಕ್ಯೂರ್‌ಮೆಂಟ್ ಸಲಹೆಗಾರರು

***

ಮುಖ್ಯ ಆರೋಗ್ಯಾಧಿಕಾರಿ (ಸಾ.ಆ) (ಪ್ರಭಾರ) ರವರು ಸಭೆಯ ಅಧ್ಯಕ್ಷರಾದ ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ) ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು, ಗುತ್ತಿಗೆದಾರರಿಗೆ ಹಾಗೂ ಸಂಘ ಸಂಸ್ಥೆಯ ಪದಾಧಿಕಾರಿಗಳಿಗೆ ಸ್ವಾಗತ ಕೋರಿದರು.

ಮುಖ್ಯ ಆರೋಗ್ಯಾಧಿಕಾರಿ(ಸಾ.ಆ) (ಪ್ರಭಾರ) ರವರು ಮಾತನಾಡುತ್ತಾ, ಸೊಳ್ಳೆ ನಿಯಂತ್ರಣ ಕಾರ್ಯಕ್ರಮದ ಟೆಂಡರ್‌ನ್ನು ವಲಯಮಟ್ಟದಿಂದ ಆಹ್ವಾನಿಸಲು ಸೂಚಿಸಲಾಗಿರುತ್ತದೆ. ಅದರಂತೆ, ದಕ್ಷಿಣ, ಬೊಮ್ಮನಹಳ್ಳಿ, ಮಹದೇವಪುರ ಮತ್ತು ಆರ್.ಆರ್.ನಗರ ವಲಯಗಳಿಂದ ಟೆಂಡರ್ ಆಹ್ವಾನಿಸಿದ್ದು, ಇನ್ನುಳಿದ 04 ವಲಯಗಳಿಂದ ಟೆಂಡರ್ ಆಹ್ವಾನಿಸಬೇಕಾಗಿರುತ್ತದೆ ಎಂದು ತಿಳಿಸಿದರು. ತದನಂತರ ಪ್ರಸ್ತುತ ಆಹ್ವಾನಿಸಿರುವ 04 ವಲಯಗಳ ಟೆಂಡರ್ ಹಾಗೂ ಇನ್ನೂಳಿದ ವಲಯಗಳಲ್ಲಿ ಆಹ್ವಾನಿಸಬೇಕಾಗಿರುವ ಟೆಂಡರ್‌ಗೆ ಕೆಲವು ಮಾರ್ಪಾಡುಗಳನ್ನು ಮಾಡುವಂತೆ, ಬೆಂಗಳೂರು ಸಿಟಿ ಕಾರ್ಪೋರೇಷನ್ ವರ್ಕರ್ಸ್ ಫೆಡರೇಷನ್ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮತ್ತು ವಿವಿಧ ಸಂಸ್ಥೆಯ ಗುತ್ತಿಗೆದಾರರು ಮನವಿಯನ್ನು ಸಲ್ಲಿಸಿದ್ದು, ಸದರಿ ಮನವಿಯ ಬಗ್ಗೆ ಚರ್ಚಿಸಲು ಈ ಸಭೆಯನ್ನು ಆಯೋಜಿಸಲಾಗಿದ್ದು ಎಂದು ಸಭೆಗೆ ತಿಳಿಸಿದ್ದರು.

ವರ್ಕರ್ಸ್ ಫೆಡರೇಷನ್ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮತ್ತು ವಿವಿಧ ಸಂಸ್ಥೆಯ ಗುತ್ತಿಗೆದಾರರು ಮನವಿಯನ್ನು ಪರಿಶೀಲಿಸಿ, ಎಲ್ಲಾ ಅಧಿಕಾರಿಗಳು, ಗುತ್ತಿಗೆದಾರರು ಹಾಗೂ ಸಂಘ ಸಂಸ್ಥೆಯ ಪದಾಧಿಕಾರಿಗಳೊಂದಿಗೆ ಸುದೀರ್ಘವಾಗಿ ಚರ್ಚಿಸಿ, ಸೊಳ್ಳೆ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ವಲಯಮಟ್ಟದಿಂದ ಆಹ್ವಾನಿಸಿರುವ ಟೆಂಡರ್‌ಗೆ ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಲಾಯಿತು.

1. ಪ್ರಸ್ತುತ ಆಹ್ವಾನಿಸಿರುವ ಟೆಂಡರ್‌ನಲ್ಲಿ ವಾರ್ಷಿಕ ವಹಿವಾಟು ಮತ್ತು ಸೇವಾ ಅನುಭವನ್ನು 05 ವರ್ಷಗಳಲ್ಲಿ ಯಾವುದಾದರೂ 01 ವರ್ಷ ಸೇವಾನುಭವ ಹೊಂದಿರಬೇಕೆಂದು ನಿಗಧಿಪಡಿಸಲಾಗಿದೆ. ಇದರ ಬದಲಾಗಿ 05 ವರ್ಷಗಳಲ್ಲಿ ನಿರಂತರ 03 ವರ್ಷ ಸೇವಾನುಭವವನ್ನು ಹೊಂದಿರತಕ್ಕದ್ದು. ಸದರಿ 03 ವರ್ಷಗಳಲ್ಲಿ 01 ವರ್ಷದ ಟೆಂಡರ್ ಮೊತ್ತದ ಸೇವಾನುಭವ ಹೊಂದಿರಬೇಕು.

..2.

Scanned with OKEN Scanner

2. ಪ್ರಸ್ತುತ ಆಹ್ವಾನಿಸಿರುವ ಟೆಂಡರ್‌ಗಳಿಗೆ ಹಾಗೂ ಇನ್ನುಳಿದ ಆಹ್ವಾನಿಸಬೇಕಾಗಿರುವ ಟೆಂಡರ್‌ಗಳಿಗೆ ಟೆಂಡರ್ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕವನ್ನು ದಿನಾಂಕ:05-04-2024ರವರೆಗೆ ವಿಸ್ತರಿಸಲು ಸೂಚಿಸಲಾಯಿತು.
3. ಪ್ರಸ್ತುತ ಆಹ್ವಾನಿಸಿರುವ ಟೆಂಡರ್‌ನಲ್ಲಿ ಟೆಂಡರ್ ದಸ್ತವೇಜಿನಲ್ಲಿ ಇ.ಎಸ್.ಐ ಮತ್ತು ಪಿ.ಎಫ್ ಚಲನ್‌ಗಳನ್ನು ಒದಗಿಸುವಂತೆ ಸೂಚಿಸಿದ್ದು, ಆದರೆ ಕೆಲವು ವಲಯಗಳಲ್ಲಿ ಇ.ಎಸ್.ಐ ಮತ್ತು ಪಿ.ಎಫ್ ಪಾವತಿಸದೇ ಇರುವುದರಿಂದ ಅಂತಹ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಿದ್ದಲ್ಲಿ ಸದರಿ ಸಂಸ್ಥೆಯವರ ಇ.ಎಸ್.ಐ ಮತ್ತು ಪಿ.ಎಫ್ ಚಲನ್‌ಗಳ ಸಲ್ಲಿಸದೇ ಇದ್ದಲ್ಲಿ ವಿನಾಯಿತಿ ನೀಡಲು ತೀರ್ಮಾನಿಸಲಾಯಿತು. ಆದರೆ, ಇ.ಎಸ್.ಐ. ಮತ್ತು ಪಿ.ಎಫ್. ರಿಜಿಸ್ಟ್ರೇಷನ್ ಸರ್ಟಿಫೀಕೆಟ್‌ಗಳನ್ನು ಕಡ್ಡಾಯವಾಗಿ ಪಡೆಯಲು ತೀರ್ಮಾನಿಸಲಾಯಿತು.
4. ಪ್ರಸ್ತುತ ಆಹ್ವಾನಿಸಿರುವ ಟೆಂಡರ್‌ನಲ್ಲಿ ನಮೂದಿಸಿರುವ ವಾರ್ಷಿಕ ವಾಹಿವಾಟನಲ್ಲಿ ಯಾವುದೇ ಬದಲಾವಣೆ ಮಾಡದಿರಲು ತೀರ್ಮಾನಿಸಲಾಯಿತು.
5. ಆಟೋ, ಇಂಧನ ಮತ್ತು ಸ್ಟ್ರೇಯಿಂಗ್ ದರಗಳನ್ನು ಸ್ಥಳೀಯ ಮಟ್ಟದಿಂದ ಕೊಟೇಷನ್ ಪಡೆದು ಮಾರುಕಟ್ಟೆ ದರಕ್ಕೆ ಹೊಂದಾಣಿಕೆ ಮಾಡಿಕೊಂಡು ದರಗಳನ್ನು ನಿಗಧಿಪಡಿಸಲು ಸೂಚಿಸಲಾಯಿತು.

ಮೇಲ್ಕಂಡ ಎಲ್ಲಾ ಅಂಶಗಳನ್ನು ಹೊರತುಪಡಿಸಿ, ಪ್ರಸ್ತುತವಾಗಿ ಇರುವ ಟೆಂಡರ್ ದಸ್ತವೇಜಿನಲ್ಲಿ ಯಾವುದೇ ಮಾರ್ಪಾಡುಗಳಿಲ್ಲದೇ ವಲಯ ಮಟ್ಟದಿಂದ ಟೆಂಡರ್ ಆಹ್ವಾನಿಸಲು ಕ್ರಮವಹಿಸುವಂತೆ ಎಲ್ಲಾ ವಲಯ ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಿಶೇಷ ಆಯುಕ್ತರು(ಆರೋಗ್ಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು :

1. ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಅಪ್ತಶಾಖೆಗೆ ಸಲ್ಲಿಸಿದೆ.
2. ಎಲ್ಲಾ ವಲಯ ಆಯುಕ್ತರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಮುಖ್ಯ ಆರೋಗ್ಯಾಧಿಕಾರಿಗಳು(ಸಾ.ಆ) ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಎಲ್ಲಾ ವಲಯಗಳ ಆರೋಗ್ಯಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
5. ಕಛೇರಿ ಪ್ರತಿ.

Scanned with OKEN Scanner